# ಮಧುರ ಭಾವದ ಕೀರ್ತನೆಗಳು

## ೧೫ (೨೮೬)

ಅರೆ ಅವನಾರೆಲೆ ಜಾಣೆ ಆರೆ ಅವನಾರೆ [೮] ರಾಗ : ತಾಳ:
ಅರೆ ಅವನಾರೆಲೆ ಜಾಣೆ ಆರೆ ಅವನಾರೆ
ವೀರಹಕ್ಕಿಯನೇರಿ ನಿರುತದಿ ಧ್ವನಿಗೈದುವ ಶ್ರೀಪತಿ ಕಾಂಬೆ || ಪ ||

Scanned with CamS

ಬಾಹ ಭಾವವ ನೋಡೆ ಕರುಣೆಯ ಬಾಹುಬಂದಿಯ ನೋಡೆ
ದೇಹ ಮಾಟವ ನೋಡೆ ಕರುಣಾಬ್ಧಿ ಸ್ನೇಹ ನೋಟವ ನೋಡೆ
ಆ ಹೇಮಾಂಬರ ನೋಡೆ ಮುಕುಟವಿಟ್ಟಿಹ ಕುಂಡಲ ನೋಡೆ
ರೂಹ ನೋಡಿ ಮೈ ಮರೆವ ಮುನಿಸಮೂಹದೆಡ ಬಲದರ್ಥಿಯ ನೋಡೆ ॥ ೧ ॥

ಆಭರಣದ ಕಾಂತಿ ಕಂಡ್ಯಾ ಮೃಗನಾಭಿ ತಿಲಕವ ಕಂಡ್ಯಾ
ಶೋಭಿಸುವ ನಾಮ ಕಂಡ್ಯಾ ಕೌಸ್ತುಭ ಶ್ರೀವತ್ಸ ಕಂಡ್ಯಾ
ತ್ರಿಭುವನ ಗರ್ಭ ಕಂಡ್ಯಾ ತ್ರಿವಳಿಯ ನಾಭಿ ಚೆಲ್ವಿಕೆ ಕಂಡ್ಯಾ
ಶ್ರೀ ಭುಜಂಗವೇಣಿ ಲಕುಮಿಯಳ ತಾ ಬಿಗಿದಪ್ಪೊ ವಕ್ಷವ ಕಂಡ್ಯಾ ॥ ೨ ॥

ಸ್ವಾಮಿಗೆ ಮನಸೋತೆನೆ ಭಕ್ತಪ್ರೇಮಿಗೆ ಮನಸೋತೆ
ರಾಮನಿಗೆ ಮನಸೋತೆ ನಾ ಘನಶ್ಯಾಮನಿಗೆ ಮನಸೋತೆ
ವಾಮನಗೆ ಮನಸೋತೆನೆ ಪೂರ್ಣಕಾಮನಿಗೆ ಮನಸೋತೆ
ಶ್ರೀ ಮನೋಹರ ಪ್ರಸನ್ವೆಂಕಟೇಶನ ನಾಮಕೆ ಮೆಚ್ಚು ಬಿದ್ದು ಮನಸೋತೆ ॥ ೩ ॥

# ೨೪ (೨೯೫)

ಕರೆತಾರೆ ಕರೆತಾರೆ ಶ್ರೀನಿವಾಸನ[೮] ರಾಗ : ಹ

ಕರೆತಾರೆ ಕರೆತಾರೆ ಶ್ರೀನಿವಾಸನ
ಸುರರರಸ ಸ್ವಾಮಿ ಶ್ರೀ ವೆಂಕಟೇಶನ ॥ ಪ.॥

ಬರಹೇಳೆ ಬರಹೇಳೆ ಬೇಗ ಕರಿಗಮನೆ ರಂಗಗೆ
ಸಿರಿರಾಣಿರಮಣ ಘನಾಂಗಗೆ
ಅರಘಳಿಗೆ ಸರಸವಲ್ಲ ಅರಸನಿಲ್ಲದವಳೆ ಸಲ್ಲ
ಸ್ಮರನೆಂಬೊ ಸಿರಿಕಳ್ಳ ಕರುಣ್ಯಾಲ್ಲ ॥ ೧ ॥

ಸುಂದರ ಸುಂದರ ಶುಭಮಂದಿರನ್ನ ದಯಾರಸ
ಸುಂದರನ್ನ ವರಕಂಬುಕಂದರನ್ನ
ಚೆಂದಾವರೆಗಣ್ಣವನ ಸಿಂಧೂರ ವರದನ್ನ ದೇ-
ವೇಂದ್ರಜಿತ ಪಾರಿಜಾತ ತಂದನ್ನ ॥ ೨ ॥

ಹೋಯಿತೆ ಹೋಯಿತೆ ಹೊನ್ನಪ್ರಾಯ ಯದುರಾಯ ಬಾರ
ದಾಯಿತೀ ಅವಸ್ಥೆ ಪುಟ್ಟು ಹೊಂದಿ
ಕಾಯಬೇಕೆಂದೊಮ್ಮಿಗೆ ಉದಯವಾದ ಪ್ರಸನ್ವೆಂಕಟ
ರಾಯ ಬಂದ ಫಲಿಸಿತಾನಂದ ॥ ೩ ॥

Scanned with CamS

## ೩೭ (೩೦೮)

### ಸುಳಿದನ್ಯಾರೆ ಈಗ ಸುಳಿದನ್ಯಾರೆ[೮]

ರಾಗ : ಮಧುಮಾಧವಿ; ತಾಳ : ಅ

ಸುಳಿದನ್ಯಾರೆ ಈಗ ಸುಳಿದನ್ಯಾರೆ
ಕೆಳದಿ ಎನ್ನುಪ್ಪರಿಗೆಯ ಮುಂದೆ ॥ ಪ. ॥

ಹೊಳೆವ ಹೊಂಬಕ್ಕಿಯ ಮೇಲೆ
ಥಳಥಳಿಪ ಮಿಂಚಿನಂತೆ ॥ ಅ.ಪ. ॥

ಎಸೆವ ಮಣಿ ಕನಕಾಭರಣಿಟ್ಟು
ನಸುನಗೆ ಬೆಳಗ ವೈಸರಿಸಿ
ಬಿಸಜಾಕ್ಷಿಯಳೋರ್ವಳ ಕೂಡ
ಹೊಸ ಪರಿ ಸರಸವಾಡುತಲಿ ॥ ೧ ॥

ಮುಂದುಗ್ಗಡಿಪ ಸುರಸಂದೋಹ
ಹಿಂದಕ್ಕೆಳದಿ ಮುನಿಸಮ್ಮೋಹ
ಅಂದದಿ ಮುಂಗಡಿರುವ ವಾದ
ಸಂದಣಿಯ ಸೊಬಗಿನಲ್ಲಿ ॥ ೨ ॥

Scanned with CamS

ಎನ್ನ ಮನದಿ ನೇಹವ ಬೀರಿ
ಇನ್ನ್ಯಾಕೆ ದೂರ ನೋಡಿದನೆ
ಮನ್ನಿಸ್ಯವನ ತಾರೆ ಶ್ರೀ ಪ್ರ-
ಸನ್ನವೆಂಕಟವರದನ ಬೇಗ ॥ ೩ ॥

Scanned with CamS

## ೩೩ (೩೦೪)

**ಭಂಡು ಮಾಡದಿರು ಬೆಣ್ಣೆಗಳ್ಳ ಈ**[೮, ೬] ರಾಗ : ಬಹರಿ; ತಾಳ : ತ್ರಿಪು

ಭಂಡು ಮಾಡದಿರು ಬೆಣ್ಣೆಗಳ್ಳ ಈ
ಪುಂಡತನ ನಿನಗೆ ಸಲ್ಲ ಪರ

Scanned with CamS

ಪೆಂಡಿರೆಳೆಯದಿರೊ ಹೀಗೆಲ್ಲ ಅತ್ತೆ
ಕಂಡರೆ ಕೊಲ್ವಳೊ ಗೋಪಿನಲ್ಲ ॥ ಪ. ॥

ನೀರೆಯರೊಳಾಟವು ತರವಲ್ಲ ನಗೆ
ಬಾರದು ಪರಾಂಗನೆರೊಳು ಚೆಲ್ವ
ವಾರಿಜಾಕ್ಷಿಯರಪ್ಪಿ ಎತ್ತಿಹ್ಯಲ್ಲ ಕೂಗ-
ದಿರೊ ಬಾಗಿಲೊಳು ಮಾವ ಹೊಲ್ಲ ॥ ೧ ॥

ಹೆಜ್ಜೆ ಹೆಜ್ಜೆಗ್ಹುಚ್ಚ ಮಾಡಿದೆಲ್ಲ ನಿನ್ನ
ಕಜ್ಜದೊಳು ಕರುಣೆನಿತಿಲ್ಲ ಧರ್ಮ
ರಾಜ್ಯದೊಳು ಚಾರವೃತ್ತಿಯಿಲ್ಲ ನಮ್ಮ
ಲಜ್ಜೆ ಸೂರ್‍ಯಾಡಿದೆ ಅಂಜಿಕಿಲ್ಲ ॥ ೨ ॥

ಬುದ್ಧಿ ಸತ್ಯ ಮಾತು ಮಿಥ್ಯವಲ್ಲ ಪೂರ್ಣ
ಶುದ್ಧ ನಂಬಿದೆವೊ ಮೃದುಸೊಲ್ಲ ಇನ್ನು
ಸದ್ದು ಮಾಡದೆ ಕೂಡೆ ಠಾವಿಲ್ಲ ನಮ್ಮ
ಮುದ್ದಿಸೊ ಪ್ರಸನ್ವೆಂಕಟ ನಲ್ಲ ॥ ೩ ॥

Scanned with CamS

## ೨೯ (೩೦೦)

ಏತರ ಬಲ್ಲತನವೋ ಕೃಷ್ಣಯ್ಯ ನಿನ(೨)

ರಾಗ : ಕಾಫಿ; ತಾಳ :

ಏತರ ಬಲ್ಲತನವೋ ಕೃಷ್ಣಯ್ಯ ನಿನ- ।
ಗೇತರ ಬಲ್ಲತನವೋ || ಪ ||

ಏತರ ಬಲ್ಲತನಾಥರ ನಮ್ಮ ಸನಾಥರ ಮಾಡಿಸಂ-
ಪ್ರೀತಿಯ ಬಡಿಸಿದನ್ನೇತರ || ೧ ||

ಬಿರಿದಂತೆ ಭಕುತರ ಪೊರೆವದು ಗಡನಿನ್ನ
ಸ್ಮರಣೆಗೆ ಮರೆವಿತ್ತು ದುರಿತಕೊಪ್ಪಿಸುವದನ್ನೇತಾ || ೨ ||

ಬಲ್ಲತನದ ಗುರುತೆಲ್ಲ ದೇಶದೊಳು ನ-
ನ್ನಲ್ಲಿ ಅಜ್ಞಾನದ ಬಳ್ಳಿ ತೊಡಕಿಸುವದೇತರ || ೩ ||

ನಿಜರವಮಾನದ ಕುಜಕೆ ಪರಸು-ರಾಮ
ತ್ರಿಜಗವಂದಿತ ನಿನ್ನ ಭಜಕರೊಳಿಡಲೊಲ್ಲದೇತರ || ೪ ||

ದುರಿತಗಿರಿ ತಾ ಅರಿಗಿರಿಗೆಂಜೆ ನಾಮ-
ವಜ್ಜರವಿಕೆ ಪ್ರಸನ್ನವೆಂಕಟರಸ ಮನ್ನಿಸಲೊಲ್ಲದೇತರ || ೫ ||

Scanned with CamS

# ೨೧ (೨೯೨)

## ಏನು ರಂಗ ದೂರ ನೋಡುವೆ(೮)

ರಾಗ : ಶಾ

ಏನು ರಂಗ ದೂರ ನೋಡುವೆ
ಪ್ರಾಣನಾಥ ದೂರ ನೋಡುವೆ || ಪ ||

ಒಳ್ಳೆ ನಾರಿಯರೊಳು ಮನವಿಟ್ಟು ನೀನನ್ನ
ಸಲ್ಲದವಳ ಕೈಯವಿಡಿದ್ಯೇಕೆ ಮೊದಲಿಗೆ || ೧ ||

ಏಸು ಮನೆಯ ಪೊಕ್ಕು ದಣಿದೆ ಕಾಣದೆ ಕೃಷ್ಣ
ಆಸು ಮನೆಯೊಳು ನೀನಿದ್ದು ಕಾಣಿಸಿಕೊಳ್ಳೆ

ನಿನ್ನವಳೆನಿಸಿದ ಬಳಿಕ ಮಾತಾಡದೆ
ಅನ್ಯಾಶ್ರಯ ನನಗಿದ್ದರೆ ಹೇಳು ನನ್ನಾಣೆ || ೨ ||

ನೀ ಪರಿಪರಿಸಲಾರದ ತಪ್ಪೆನ್ನಲ್ಲುಂಟೇನೊ
ಈ ಪರಿಗಾಳ ಬಳಲಿಸಿ ಸುಮ್ಮನೆ || ೩ ||

ದೂರ ನೋಡಿದರೆ ನೀ ನೋಡು ನಾ ಬಿಡೆನೆಂಬೆ
ದೂರ ಸಾರಿ ನಿನ್ನ ಪೋಗಲಾರೆ ಪ್ರಸನ್ವೆಂಕಟೇಶ || ೪ ||

Scanned with CamS

# ೩೮ (೩೦೯)

## ಮೊಸರಾ ಕಡಿದಳು ಭಕುತಿಲಿ ಗೋಪೀ[೯]+

ರಾಗ : ದೇವಗಂಧಾರಿ; ತಾ:

ಮೊಸರಾ ಕಡಿದಳು ಭಕುತಿಲಿ ಗೋಪೀ ।
ಪಸುಳಿ ಕೃಷ್ಣಮ್ಮಗೆ ಹೊಸ ಬೆಣ್ಣೆಬೇಕೆಂದೂ ॥ ಪ ॥

ಪ್ರಾತಃಕಾಲದಲೆದ್ದು ಮಿಂದು ಪೊಂಬಟ್ಟೆಯುಟ್ಟು ।
ನೂತನರನ್ನದೊಡಗೆಗಳಿಟ್ಟು ।
ಪೂತ ಮಲ್ಲಿಗೆ ಸಂಪಿಗೆಯಿಂ ಮುಡಿಯಾಗಟ್ಟಿ ।
ಶ್ರೀತಿಲುಕವ ಕನ್ನಡಿಯಾ ನೋಡಿಟ್ಟು ॥ ೧ ॥

ಉಡುಪ ಕಾಂತಿಯ ಭಾಂಡವೆ ಕರದಲ್ಲಿ ।
ಪಿಡಿದ ವಿದ್ರುಮ ದಂಡವೆ ದಂಡಿಗೆ ।
ಕುಡಿ ನಳನಳಿಪ ಬೆಳ್ಳಿಯ ಪಾಶವೆ ತಂತು ।
ನುಡಿವ ಮಂಜುಳ ಗಾತ್ರದ ಶಬ್ದದೀ ॥ ೨ ॥

ಕಮುಸ್ವಾದುಗೋದಧಿ ಕವಡಿ ತುಳುಕಿ ಧುಂಮು ।
ಧುಡುಧುಡುಧುಂಮುಕೆಂಬಾ ತಾಳ್ಗತಿಗೆ ।
ಕಮಲಶಯನ ಕಮಲಾಕ್ಷ ಮುಕುಂದ ಎಂದು ।
ದೃಢ ಭಕ್ತಾರಂತಾನಂದ ಪುಳುಕಾಂಗದೀ ॥ ೩ ॥

ಮುಖವಿಕಾಸದಿ ಮಂದಹಾಸಟ್ಟಹಾಸದಿ ।
ಲೋಕ ಮೂರ್ತಿ ರಂಗನೊಳು ಮಾತಾಡುತಾ ।
ಭಕತಾಗ್ರಣೀಗ ಳಂತೆ ಹಾ ಕೃಷ್ಣ ಎಂದು ಪಾಡಿ ।
ಸಕಲ ಸುಖಾಬ್ಧಿಯೊಳು ಓಲಾಡುತ್ತಾ ॥ ೪ ॥

ರತ್ನ ಕಂಕಣ ನೂಪುರ ಝುಣ ಝುಣಾರವ ।
ಯೆತ್ತಿ ಪಾಡುವವರವ ಸುಸ್ವನವು ।

Scanned with CamS

ಮ(೦?)ಥ್ನರವ ಕೈಹರಿ ಕುಣಿದು ಬೆಣ್ಣೆಯಾ ಬೇಡೆ ।
ಕರ್ತಾ ಪ್ರಸನ್ನ ವೆಂಕಟ ಕೃಷ್ಣಗೆ

॥ ೫ ॥

Scanned with CamS

ಕಾಂತೆ ಸೈರಿಸಲಾರೆ ಕಂಜಾಕ್ಷನಗಲೀರೆ[೧]

ಕಾಂತೆ ಸೈರಿಸಲಾರೆ ಕಂಜಾಕ್ಷನಗಲೀರೆ || ಪ ||

ಕಂತುಶರದ ಬಲ ಕಡುವೇಗವಾಯಿತಲೆ
ಕಾಂತ ಮೂರುತಿಯ ಕರೆತಾರೆ ತಾಯೆ || ಅ.ಪ ||

ಶೀತಕರನ ಪ್ರಭೆಯು ಶುಕದುಂಬಿಗಳ ರವವು
ಸೋತಬಾಲೆಯು ಮುಂದೆ ಸರಸವೆ ಸೊಗಸೋದೆ
ನೀತವೇನೆಲೆ ತಂಗಿ ನೀರಜನಾಭಗೆ || ೧ ||

ನೀರೊಳು ಕರೆದೆನ್ನ ನೀಲ ಜೀಮೂತ ವರ್ಣ
ನೀರಜದ್ವಕ್ತ್ರವ ನಖದಿ ಘಾಸಿ ಮಾಡುವ
ನಾರಾಯಣನೆನ್ನ ಸುಳಿದರಿನ್ನೇನೆ || ೨ ||

ಅಧರದೊಳಿಟ್ಟುಕೊಳಲು ಅತಿಮೋಹಿಸುವ ನಲ್ಲ
ಯದುಕುಲದರಸ ಮೆಚ್ಚಿ ಎನ್ನೊಳು ಘನ್ನ
ಮಧುಪಕುಂತಳ್ಯಾವಳೊ ಮನೆಗೊಯ್ದಳೊ || ೩ ||

ಅವಗವನ ಕೇಳಿ ಆಡುವವನ ಸಾಲಿ
ದಾವ ಸುಕೃತದಿಂದ ದೊರೆತನೊ ಶ್ರೀಮುಕುಂದ
ಆವ ದುಷ್ಕೃತ ಬಂದು ಅಗಲಿಸಿತಿಂದು || ೪ ||

ಚಂಪಕದಲಮಾರ್ಲೆ ಚಂದನದ ಲೇಪ ಒಲ್ಲೆ
ಕಂಪಿನೊಳಗೆ ನಿಂದು ತಕ್ಕೈಸುವಾನಂದ
ಸಂಪನ್ನ ತಾ ಬಂದು ಸಲಹುವನೆಂದೆ || ೫ ||

ಪರಿಯಂಕದಲಿ ಕುಳಿತು ಪರಿಪರಿಯ ಸುಖವಿತ್ತು
ಕರದಿ ಕಂಕಣವಿಟ್ಟು ಕಡೆಯ ಪೆಂಡ್ಯಾ ಕೊಟ್ಟು
ಕರುಣೆ ಜರಿದು ತರವೆ ತನಗಿದು || ೬ ||

ಇಂದಿರೆ ರಮಣ ಎನ್ನ ಇಚ್ಛೆಯ ಸುರಧೇನು
ಸುಂದರ ರನ್ನ ಪ್ರಸನ್ನ ವೆಂಕಟೇಶನ
ಸಂದೇಹವಿಲ್ಲದೆ ಶರಣು ಹೊಂದಿದೆನೊ ॥ ೭ ॥

Scanned with CamS

## ೩೫ (೩೦೭)

ರಂಗನ್ಯಾಕೆ ತಿರುಗಿ ಬಾರನೆ ಅಂತ[೮] ರಾಗ : ...

ರಂಗನ್ಯಾಕೆ ತಿರುಗಿ ಬಾರನೆ ಅಂತ
ರಂಗಪೀಠದಿ ಮೊಗದೋರನೆ || ಪ

ಮಂಗಳಾಂಗನೊಳು ಮಾತಾಡದೆ ಸತಿ
ಕಂಗಳು ದಣಿಯದೆ ನೋಡಿ
ಅಂಗನೆ ಹ್ಯಾಗೆ ಜೀವಿಸಲಮ್ಮ ಎ-
ನ್ನಿಂಗಿತವಾರಿಗುಸುರಲಮ್ಮ || ೧

ಕಲ್ಲೆದೆಯಾದೆ ಇನಿತುದಿನ ಜೀವ
ಕೊಲ್ಲದು ಹೋಯೆಂಬ ರೋದನ
ಪುಲ್ಲನಾಭನ ಎಂಜಲುಂಡರೆ ಕಷ್ಟ
ವಿಲ್ಲದ ಸುಖ ಕಣ್ಣು ಕಂಡರೆ || ೨

ಕೃಷ್ಣನ ಶುಭಗುಣ ಪೊಗಳುತ ಬಹು
ಕಷ್ಟ ನೀಗಿದೆ ನಕ್ಕು ತತ್ವತಃ
ಸೃಷ್ಟೀಶ ಪ್ರಸನ್ವೆಂಕಟೇಶನ ನನೆ
ವಷ್ಟರೊಳಗೆ ಮಾಯವಾದನೆ || ೩ ||

Scanned with CamS